ಲೋಕೋಪಯೋಗಿ ಇಲಾಖೆಯ ಹಳೆ ವಾಹನಗಳ ವಿಲೇವಾರಿ

300(589); ಶ್ರೀ ನಾರಾಯಣ ಗೌಡ (ಕೆ.ಆರ್.ಪೇಟೆ)

ಅ) ಕೆ.ಆರ್.ಪೇಟೆ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ವಶದಲ್ಲಿರುವ ಹಳೆ ವಾಹನಗಳು ತುಕ್ಕು ಹಿಡಿದು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಹಳೇ ವಾಹನಗಳನ್ನು ಕೂಡಲೇ ವಿಲೇ ಮಾಡಲು ಸರ್ಕಾರವು ಇದುವರೆವಿಗೂ ಏಕೆ ಕ್ರಮ ಕೈಗೊಂಡಿಲ್ಲ;

ಇ) ಈ ಹಳೇ ವಾಹನಗಳನ್ನು ಕೂಡಲೇ ವಿಲೇ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ತುಕ್ಕು ಹಿಡಿದಿರುವ ಸ್ಥಿತಿಯಲ್ಲಿ ಯಾವುದೇ ವಾಹನ ಇರುವುದಿಲ್ಲ.

ಆ) ಒಂದು ರೋಡ್ ರೋಲರ್ ಆವಲಿಂಗ್ ಜೋಸೇಫ್ 6796 ಅನ್ನು ಅನುಪಯುಕ್ತಗೊಳಿಸಲಾಗಿದ್ದು, ಸದರಿ ವಾಹನವನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಕ್ರಮ ಕೈಗೊಳ್ಳಲಾಗುವುದು.

ನಿವೇಶನಗಳ ಅಕ್ರಮ ಹಂಚಿಕೆ

301(590); ಶ್ರೀ ನಾರಾಯಣ ಗೌಡ (ಕೆ.ಆರ್. ಪೇಟೆ)

ಅ) ಕೆ.ಆರ್. ಪೇಟೆಯ ಹೇಮಾವತಿ ಬಡಾವಣೆಯ ನಿವೇಶನಗಳ ಅಕ್ರಮ ಹಂಚಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದ್ದು ಕಟ್ಟಡ ನಿರ್ಮಾಣಕ್ಕೆ ತಡೆಯಿದ್ದರೂ ಅಕ್ರಮವಾಗಿ ಕಟ್ಟಡಗಳು ತಲೆಯೆತ್ತುತ್ತಿರುವುದು ಹಾಗೂ ಅಲ್ಲೊಂದು ಇಲ್ಲೊಂದು